



# ಮಣ್ಣಿನಲ್ಲಿ ಅರಳುವ ಕಲಾಕೃತಿ

**ಕರಾವಳಿಯ ಅನನ್ಯ ಕಲಾವಿದ ವೆಂಕಿ ಪಲಿಮಾರ್ ಮಣ್ಣಿನಲ್ಲಿ ವಿವಿಧ ಕಲಾಕೃತಿ ರಚಿಸುವಲ್ಲಿ ನಿಸ್ಸೀಮರು. ಮಣ್ಣಿನ ಗಣೇಶ, ವಿವಿಧ ವ್ಯಕ್ತಿಗಳ ನೈಜ ಚಿತ್ರಣ ನೋಡುಗರನ್ನು ಕೂಡಲೇ ಸೆಳೆಯುವಂತಿದೆ.**

■ ಚಿತ್ರ-ಲೇಖನ: ಬಳಕೂರು ವಿ.ಎಸ್. ನಾಯಕ

ಯಕ್ಷಗಾನ ವೇಷಧಾರಿ ಬಣ್ಣ ಬಳಿದು ಸಿದ್ಧವಾಗುತ್ತಿರುವ ಶಿಲ್ಪ, ಕರಾವಳಿಯ ಭೂತ ಕೋಲ, ಹಳ್ಳಿಯ ಮುಗ್ಧ ಜನರ ಚಿಂತನೆ, ಪ್ರಕೃತಿಯ ಅಳಿವು ಮತ್ತು ಉಳಿವು ಬಿಂಬಿಸುವ ಶಿಲ್ಪಗಳು, ಮರವನ್ನು ಕಡಿದರೆ ಏನು ಗತಿಯೆಂದು ಚಿಂತನಾಶೀಲನಾದ ಮಗು... ಹೀಗೆ ಒಂದಕ್ಕಿಂತ ಒಂದು ವಿಭಿನ್ನ ಭಾವನೆ, ಆಲೋಚನೆ ಎಲ್ಲವೂ ವೆಂಕಿಯವರ ಮಣ್ಣಿನ ಶಿಲ್ಪಗಳಲ್ಲಿ ಅಂತರ್ಗತ. ಹೀಗಿರುವಾಗ ವಿಭಿನ್ನ ವಿಷಯಗಳನ್ನು ತಮ್ಮ ಮಣ್ಣಿನ ಶಿಲ್ಪಗಳಲ್ಲಿ ಅದ್ಭುತವಾಗಿ ಅದರ ನೈಜತೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಸಂದೇಶ ನೀಡುವ ಇವರ ಮಣ್ಣಿನ ಕಲಾಕೃತಿಗಳನ್ನು ಎಲ್ಲರ ಮನಸೂರೆ ಗೊಳ್ಳುವುದರಲ್ಲಿ ಸಂದೇಹವಿಲ್ಲ.

ಇಂತಹ ಅದ್ಭುತ ಮಣ್ಣಿನ ಕಲಾಕೃತಿಗಳನ್ನು ರಚಿಸಿದವರು ಫಲಿಮಾರಿನ ವೆಂಕಿ ಪಲಿಮಾರ್. ಇವರು ದಕ್ಷಿಣ ಕನ್ನಡ ಜಿಲ್ಲೆಯ ಪಡುಬಿದ್ರಿಯ ಅಡವೆ ಎಂಬ ಗ್ರಾಮದವರು. ಇವರಿಗೆ ಚಿಕ್ಕಂದಿನಿಂದಲೂ ಮಣ್ಣಿನ ನಂಟು ಬಹಳ. ಚಿಕ್ಕವರಿರುವಾಗ ಮಣ್ಣಿನ ಕಲಾಕೃತಿಗಳನ್ನು ತಮ್ಮ ಮನಸ್ಸಿಗೆ ಬಂದ ಹಾಗೆ ರಚಿಸುತ್ತಿದ್ದರು. ಕಾಲ ಕ್ರಮೇಣ ಮಣ್ಣಿಗೆ ಮನಸೋತು ತಮ್ಮ ಮನೆಯನ್ನೇ ಕಲಾ ಗ್ಯಾಲರಿಯನ್ನಾಗಿ ಮಾಡಿದ್ದಾರೆ. ಇವರ ಸಂಗ್ರಹದಲ್ಲಿ ಇವರು ಮಾಡಿದ ವಿಭಿನ್ನ ಆಯಾಮಗಳುಳ್ಳ 100ಕ್ಕೂ ಹೆಚ್ಚು ಮಣ್ಣಿನ ಕಲಾಕೃತಿಗಳನ್ನು ನೋಡಬಹುದು.

ಮೂಲತಃ ಕಲಾವಿದರಲ್ಲದಿದ್ದರೂ ಕೂಡ ಕರಾವಳಿಯಲ್ಲಿ ಹೆಂಚನ್ನು ತಯಾರಿಸಲು ಬಳಸುವ ಮಣ್ಣನ್ನು ತಂದು ವಿಭಿನ್ನ ಸಂಸ್ಕೃತಿಯನ್ನು ಬಿಂಬಿಸುವ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಪ್ರತಿಯೊಂದು ಮಣ್ಣಿನ ಕಲಾಕೃತಿಗಳು ಸಮಾಜದ ಹಿಂದಿನ ಮತ್ತು ಮುಂದಿನ ಈಗಿನ ಪ್ರಸ್ತುತ ವಿಷಯಗಳನ್ನು ಮಣ್ಣಿನಲ್ಲಿ ರಚಿಸಿ ಕಲಾಸಕ್ತರ ಮಡಿಲಿಗೆ ಅರ್ಪಿಸಿದ್ದಾರೆ.



'ಮಣ್ಣಿನಿಂದಲೂ ಕೂಡ ಕಲಾವಿದ ಕಲಾವಿದ ಮನಸೆಳೆಯುವ ಕಲಾಕೃತಿ ರಚಿಸಬಹುದು. ಇದರ ಉದ್ದೇಶ ಇಂದಿನ ವಿದ್ಯಮಾನವನ್ನು, ಶ್ರೀಮಂತಿಕೆಯನ್ನು ಎಲ್ಲಾ ಕಡೆಗೆ ತಿಳಿಸುವುದೇ ಆಗಿದೆ' ಎನ್ನುತ್ತಾರೆ ಕಲಾವಿದ ವೆಂಕಿ ಪಲಿಮಾರ್.



ಇವರು ರಾಜ್ಯ ರಾಷ್ಟ್ರಮಟ್ಟದಲ್ಲಿ ಹಲವಾರು ರೀತಿಯ ಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದು, ಹಲವಾರು ಕಲಾಪ್ರಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಇವರ ಕಲಾಕೃತಿಗಳು ನಮ್ಮ ನೈಜ ಜೀವನವನ್ನು ಪ್ರತಿಬಿಂಬಿಸುವಂತಿದ್ದು, ಬದುಕಿಗೆ ಹತ್ತಿರವಾಗುವ ಹಲವಾರು ವಿಷಯಗಳನ್ನು ತಮ್ಮ ಮಣ್ಣಿನ ಕಲಾಕೃತಿಗಳಲ್ಲಿ ಒಡಮೂಡಿಸಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

'ಕಲಾಕೃತಿಗಳ ರಚನೆ ಮುಖ್ಯವಲ್ಲ; ತಾವು ಮಾಡಿದ ಕಲಾಕೃತಿಗಳು ಜನಮಾನಸದಲ್ಲಿ ಎಷ್ಟುಕಾಲ ಉಳಿಯಬಲ್ಲದು, ಅವರ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಬಲ್ಲದು ಎಂಬುದು ಮುಖ್ಯ. ಅದನ್ನರಿತುಕೊಂಡು ನಾವು ಶಿಲ್ಪಗಳನ್ನು ರಚಿಸಿದರೆ ಕಲೆಯ ಉಳಿವಿನ ಜೊತೆಗೆ ಜನಮಾನಸದಲ್ಲಿ ತುಂಬ ಹತ್ತಿರವಾಗುತ್ತೇವೆ' ಎಂದು ಹೇಳುತ್ತಾರೆ ವೆಂಕಿ ಪಲಿಮಾರ್. ■